## 24ಮಿ

ಈ ಐಫೋನ್ ಆ್ಯಪ್ ಬಿಲ್ ಕಟ್ಟುವುದನ್ನು ನೆನಪಿಸುತ್ತದೆ. ಸ್ನೇಹಿತರ ಹುಟ್ಟುಹಬ್ಬಗಳನ್ನು, ಇತರ ಕಾರ್ಯಕ್ರಮಗಳನ್ನು ಪಟ್ಟಿಯಲ್ಲಿ ಸೇರಿಸಿ ನೆನಪು ಮಾಡುತ್ತದೆ. ಕಾಂಟ್ಯಾಕ್ಟ್, ಫೇಸ್‌ಬುಕ್, ಟಾಸ್ಕ್ ರ್‍ಯಾಬಿಟ್, ಚೆಕ್ ಮೊದಲಾದವುಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಟಾಸ್ಕ್ ಮಾಡುವಾಗ ಮೀಟ್, ಕಾಲ್, ಇರ್‍ಯಾಂಡ್ ಅಥವಾ ಗಿಫ್ಟ್ ಅನ್ನು ಆಯ್ಕೆ ಮಾಡಿ. ಕಾಲ್ ಅಥವಾ ಡು ಎಂಬ ಬಟನ್ ಗೋಚರಿಸುತ್ತದೆ.







## ಸ್ಟಾರ್ ಚಾರ್ಟ್

ಇದು ಐಪ್ಯಾಡ್‌ನ ಉಚಿತ ಆ್ಯಪ್ ಆಗಿದ್ದು, ನಕ್ಷತ್ರ ವೀಕ್ಷಣೆ ಮಾಡುವವರಿಗೆ ನೆರವು ನೀಡುತ್ತದೆ. ತೀರಾ ಚಿಕ್ಕದಾಗಿ ಕಾಣುವ ನಕ್ಷತ್ರವನ್ನೂ ವೀಕ್ಷಿಸಬಹುದು. ನಿಮ್ಮ ಐಪ್ಯಾಡ್ ಪರದೆಯ ಮೇಲೆ ಕಾಣುವ ನಕ್ಷತ್ರದ ಮೇಲೆ ಬೆರಳಿನಿಂದ ಕುಟ್ಟಿದರೆ ಸಾಕು. ಅದರ ಎಲ್ಲಾ ವಿವರಗಳು ತೆರೆದುಕೊಳ್ಳುತ್ತವೆ. ನೀವು ಯಾವ ದಿಕ್ಕಿಗೆ ನಿಮ್ಮ ಐಪ್ಯಾಡ್ ಅಥವಾ ಐಪಾಡ್ ಅನ್ನು ಹಿಡಿಯುತ್ತೀರೋ ಆ ಕಡೆಯ ಆಕಾಶ ಪರದೆಯ ಮೇಲೆ ಕಾಣುತ್ತದೆ. ಹಗಲೂ ಕೂಡಾ ಕೆಲವು ನಕ್ಷತ್ರಗಳು, ಸೂರ್ಯ ಕಾಣಿಸುತ್ತವೆ. ನಿಮ್ಮ ನಗರಕ್ಕೆ ಇದನ್ನು ಡಿಫಾಲ್ಟ್ ಆಗಿ ಸೆಟ್ ಮಾಡಿಕೊಳ್ಳಬಹುದು. ನಕ್ಷತ್ರ, ಗ್ರಹ, ಆಕಾಶಗಂಗೆ, ನೆಬ್ಯುಲ ಮೊದಲಾದವುಗಳ ಹೆಸರುಗಳ ಮೇಲೆ ಕುಟ್ಟಿ. ವಿವರ ಕಾಣಿಸಿಕೊಳ್ಳುತ್ತದೆ. ಉಲ್ಕಾಪಾತ, ಧೂಮಕೇತು ಮೊದಲಾದವುಗಳನ್ನು ನೋಡಬೇಕಾದರೆ ಹಣ ನೀಡಬೇಕು.

## ವೈಬರ್

ಇದು ಐಫೋನ್‌ನ ಉಚಿತ ಆ್ಯಪ್. ಬೇರೆ ವೈಬರ್ ಬಳಕೆದಾರರ ಜೊತೆ ಉಚಿತ ಕರೆ ಮತ್ತು ಸಂದೇಶಗಳ ವಿನಿಮಯ ಮಾಡಿಕೊಳ್ಳಬಹುದು. ಅಳವಡಿಕೆಯೂ ಸುಲಭ. ಆ್ಯಪ್ ಸ್ಟೋರ್‌ನಲ್ಲಿ ನಿಮ್ಮ ಫೋನ್ ನಂಬರ್ ಹಾಗೂ ಯೂಸರ್ ನೇಮ್ ಹಾಕಿ. ನಂತರ ಆ್ಯಕ್ಟಿವೇಶನ್ ಕೋಡ್ ಹಾಕಿ. ವೈಬರ್ ಎಸ್‌ಎಂಎಸ್ ಮೂಲಕ ನಿಮ್ಮ ಫೋನ್‌ಗೆ ಬರುತ್ತದೆ. ವೈಬರ್ ರನ್ ಆದ ಕೂಡಲೇ ಎಲ್ಲಾ ಕಾಂಟ್ಯಾಕ್ಟ್‌ಗಳೂ ವೈಬರ್‌ನ ಡೈರೆಕ್ಟರಿಗೆ ಬರುತ್ತವೆ. ಅಲ್ಲಿಂದ ಉಚಿತ ಕರೆ ಹಾಗೂ ಎಸ್‌ಎಂಎಸ್ ಮಾಡಬಹುದು.






## 6ಟ್ಯಾಗ್

ಇದು ವಿಂಡೋಸ್ ಫೋನ್ ಇನ್‌ಸ್ಟಾಗ್ರಾಂ ಆ್ಯಪ್. ವಿಡಿಯೋಗಳನ್ನು ಅಪ್‌ಲೋಡ್ ಮಾಡುತ್ತದೆ, ಮ್ಯಾಪ್ ತೋರಿಸುತ್ತದೆ. ಆ್ಯಪ್‌ನಿಂದಲೇ ವಿಡಿಯೋ ಹಾಗೂ ಫೋಟೊ ತೆಗೆಯಬಹುದು. ಚಿತ್ರಗಳಿಗೆ ಬಾರ್ಡರ್ ಕೊಡಬಹುದು. ಟ್ಯಾಗ್ ಮಾಡಬಹುದು. ನಿಮ್ಮ ಫೇಸ್‌ಬುಕ್ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ಲೈಕ್ ಮಾಡಿದವರ ಚಿತ್ರಗಳಿಗೆ ಹೃದಯದಾಕಾರದಲ್ಲಿ ಫ್ರೇಮ್ ಕೊಡಬಹುದು.

■ ಎಸ್. ತುಂಬೆ